ಹಾಸನ ಡಿಸ್ಟ್ರಿಕ್ಟ್ ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ ಸ್ 1903--1904ನೆ ಇಸವಿ ವಿ|| ಅರ್ಜೀ ನಂಬರ್ 260.

ಅರ್ಕಲಗೂಡು ತಾಲ್ಲೂಕು ಅರ್ಕಲಗೂಡು ಕಸಬಾದಲ್ಲಿ ಇದ್ದು ಮೃತಪಟ್ಟ ಕಂದಾಚಾರದ ರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರ ಅರ್ಕಲಗೂಡು ಕಸಬಾದಲ್ಲಿ ಇರುವ ಕಂದಾಚಾರದ ರಾಮಯ್ಯನವರ ಮಗ ಸುಬ್ಬಯ್ಯನವರು, ಫವತಿ ರಾಮಯ್ಯನವರಿಗೆ ಖಾಸಾ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಫವತಿ ಕಂದಾಚಾರದ ರಾಮಯ್ಯನವರಿಗೆ ಬರತಕ್ಕ 230 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳಲು ಸ್ ಸ್ 1901ನೆ ಇಸವಿ 7ನೆ ರಿಗ್ಯುಲೇಷ್ಯನ್ ಮೇರೆ ಸರ್ಟಿಫಿಕೇಟ್ ಪಡಿಯಲು ಅರ್ಜಿಕೊಟ್ಟಿರುತ್ತಾರೆ.

ಸದರೀ ಅರ್ಜಿಯನ್ನು ಸ್ ಸ್ 1903ನೆ ಇಸವಿ ಡಿಸೆಂಬರು ತಿಂಗಳು 12ನೆ ತಾರೀಖಿನಲ್ಲಿ ವಿಮರ್ಶೆ ಮಾಡಿ ಸರಟಿಫಿಕೇಟ್ ಕೊಡಲ್ಪಡುತ್ತೆ. ಫವತಿ ಕಂದಾಚಾರದ ರಾಮಯ್ಯನವರ ಆಸ್ತಿಗೆ ಹಕ್ಕುದಾರರು ಯಾರಾದರು ಇದ್ದರೆ ಮೇಲ್ಕಂಡ ತಾರೀಖಿಗೆ ಈ ಕೋರ್ಟು ರೂಬರೂ ಹಾಜರಾಗಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಸ್ 1903ನೆ ಇಸವಿ ನವಂಬರು ತಿಂಗಳು 7ನೆ ತಾರೀಖಿನಲ್ಲಿ ಕೊರ್ಟು ಮೊಹರ್ನಿಸಿ ನನ್ನ ದಸ್ತಖತ್ತೊಡನೆ ಕೊಡೊಣಾಗಿದೆ.

ಸಿ. ಬಿ. ಕೇಪಗಿರಿರಾವ್,
ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ ಸ್ 1903—1904ನೆ ಇಸವಿ ಅರ್ಜೀ ನಂಬರ್ 174.

ಮೃತಪಟ್ಟ ಬಸವೇಗೌಡರ ಆಸ್ತೀ ವಿಷಯದಲ್ಲಿ --

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟ್ ಮಿರ್ಲೆ ತಿಮ್ಮನಹಳ್ಳೀಲಿರುವ ಕಂಟ್ರಾಕ್ಟ್ ಬಸವೇಗೌಡರ ಹೆಂಡತಿ ಚೆನ್ನಮ್ಮ, ಮೃತಪಟ್ಟ ಬಸವೇಗೌಡರವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಮಿರ್ಲೆ ತಿಮ್ಮನ ಹಳ್ಳಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ಬಸವೇಗೌಡರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ [redacted]ಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚೆನ್ನಮ್ಮನ ಅರ್ಜಿಯನ್ನು ಸ್ ಸ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 17[illegible] ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸವೇಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ಸ್ 1903ನೆ ಇಸವಿ ನವಂಬರು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಡಿ. ಅಳಸಿಂಗ್ರಾಚಾರ್,
ಶಿರಸ್ತೇದಾರ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋ ಟಿ ಸ್ .

ತಾರೀಖು 7ನೆ ಅಕ್ಟೋಬರು 1903.

ಮೆಸ್ಸರ್ಸ್ ಲಾಂಗ್‌ಮ್ಯಾನ್ಸ್ ಗ್ರೀನ್ ಅಂಡ್ ಕೋ ಯವರಿಂದ ರಚಿಸಲ್ಪಟ್ಟ ಈ ಕೆಳಗಡೆ ಸಮೂಹಿಸಿರುವ ಹೊರಗಡೆ ಆಕಾರವನ್ನು ಮಾತ್ರ ತೋರಿಸುವ (Out line maps) ವ್ಯಾಪಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ ಬಂದಕ್ಕೆ ನಾಲ್ಕು ಕಾಸುಗಳು:—

ಯೂರೋಪ್— ವರ್ಲ್ಡ್—ಏಷಿಯಾ—ಇಂಗ್ಲೆಂಡ್ ಮತ್ತು ವೇಲ್ಸ್—ಸ್ಕಾಟ್‌ಲೆಂಡ್—ಮತ್ತು ಇಂಡಿಯಾ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಗೆಜೆಟ್ ಇಸ್ತಿಹಾರ್.

ಮೈಸೂರ್ ಗೆಜೆಟ್ ಕಂಪೈಲರವರು ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಪೋಸ್ಟ್ಗೆ ಕಳುಹಿಸಲ್ಪಡುವ ದರೋಬಸ್ತು ಗೆಜೆಟ್ ಕಾಪಿಗಳು ಅವುಗಳು ರವಾನಿಸುವದಕ್ಕೆ ತತ್ಪೂರ್ವವೆ ಕ್ರಮವಾದ ತನಿಖೆ ಮತ್ತು ಮೊಕಾಬಿಲೆ ಮಾಡುವ ಪದ್ಧತಿಯು ಇಟ್ಟರೋಣದರಿಂದ ಸದರೀ ಕಾಪಿಗಳು ಗೈರವಿಲೆ ಆಥವಾ ವಿಳಾಸದಾರರುಗಳಿಗೆ ಪಾವತಿ ಆಗದೆ ಇರುವ ವಿಷಯದಲ್ಲಿ ಕಂಪೈಲರವರು ಜವಾಬುದಾರರಾಗಿರುವದಿಲ್ಲ ಮತ್ತು ಅಂಥಾ ಗೈರವಿಲೆಯಾದ ಕಾಪಿಗಳಿಗೆ ಬದಲಾಗಿ ಎರಡನೇ ಕಾಪಿಗಳು ಕೊಡಲ್ಪಡಲಾರವು.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

Mysore Government Central Press, Bangalore—1903.